+ಪ್ರಜಾವಾಣಿ

ಶುಕ್ರವಾರ
29ನೇ ಏಪ್ರಿಲ್ 2011

2 B

ಬೆಂಗಳೂರಿನ ಮೊಹಿಸಿನ್ ಟ್ರಸ್ಟ್‌ನ ಮಾನವೀಯ ಕಾರ್ಯ

# ಸರ್ವಧರ್ಮೀಯರಿಗೆ ಉಚಿತ ಆಹಾರ

**ಮನೋಜ್‌ಕುಮಾರ್ ಗುದ್ದಿ**

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿವು ಯಾವುದೇ ಧರ್ಮದವರನ್ನೂ ಬಿಟ್ಟಿಲ್ಲ. ಜೀವನ ಎಷ್ಟು ಸತ್ಯವೋ, ಹಸಿವೂ ಅಷ್ಟೇ ಸತ್ಯ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಮೊಹಿಸಿನ್ ಟ್ರಸ್ಟ್ ಕಳೆದ ಮೂರು ತಿಂಗಳಿಂದ ಹಿಂದು, ಮುಸ್ಲಿಂ, ಕ್ರೈಸ್ತ ಹೀಗೆ ಯಾವ ಮತ-ಧರ್ಮದ ಭೇದ ಇಲ್ಲದೇ ವೃದ್ಧರಿಗೆ ಮತ್ತು ಅಂಗವಿಕಲರಿಗೆ ಉಚಿತ ಅನ್ನ, ನೀರು ನೀಡುತ್ತಿದೆ.

ನಗರದ ವಿವಿಧ ಶಾಲೆಗಳಿಗೆ ತನ್ನದೇ ಖರ್ಚಿನಲ್ಲಿ ಉಚಿತ ಬಿಸಿಯೂಟ ಮತ್ತು ಶುದ್ಧ ಕುಡಿಯುವ ನೀರನ್ನು ಪೂರೈಸುವ ಮೂಲಕ ಲಕ್ಷಾಂತರ ಮಕ್ಕಳ ಹಸಿವನ್ನು ಹಿಂಗಿಸುವ ಯೋಜನೆ ನಡೆಸುತ್ತಿರುವ ಟ್ರಸ್ಟ್‌ನ ಅಧ್ಯಕ್ಷ ಮೊಹಿಸಿನ್ ಷರೀಫ್ ಅವರ ಮುಂದೆ ಕಂಡು ಬಂದದ್ದು ನಿತ್ಯ ಆಹಾರ ಇಲ್ಲದೇ ಹಸಿವಿನಿಂದ, ಒಮ್ಮೊಮ್ಮೆ ಅರೆ ಹೊಟ್ಟೆಯಲ್ಲೇ ಕಾಲ ನೂಕುವ ವೃದ್ಧರ, ಅಂಗವಿಕಲರ ಹೊಟ್ಟೆ ತುಂಬಿಸಬಾರದೇಕೆ ಎಂಬ ಯೋಚನೆ. ತಕ್ಷಣವೇ ಈ ಆಲೋಚನೆ ಕಾರ್ಯರೂಪಕ್ಕೆ ಬಂದೇ ಬಿಟ್ಟಿತು.

**ಗುಡಿ, ಮಸೀದಿಗಳಿಗೆ ಬನ್ನಿ!:** ರಸಋಷಿ ಕುವೆಂಪು ಅವರು, 'ಬಡತನವ ಬುಡ ಮಟ್ಟ ಕೀಳಲು ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ' ಎಂದು ಕರೆ ನೀಡಿದರು. ಅದೇ ಪದ್ಯದ ಸಾಲುಗಳನ್ನು ಸ್ವಲ್ಪ ಬದಲಾಯಿಸಿ ಹಸಿವನ್ನು ನೀಗಿಸಿಕೊಳ್ಳಲು ಗುಡಿ, ಮಸೀದಿ, ಶಾಲೆಗಳಿಗೆ ಬನ್ನಿ ಎನ್ನಬೇಕಾಗಿದೆ. ಏಕೆಂದರೆ ತಮ್ಮ ಮಹಾತ್ವಾಕಾಂಕ್ಷಿ ಯೋಜನೆಯನ್ನು ಸಾಕಾರಗೊಳಿಸಲು ಟ್ರಸ್ಟ್ ಆಯ್ದುಕೊಂಡದ್ದು ಈ ಸ್ಥಳಗಳನ್ನು. ಪ್ರತಿದಿನ ಊಟ ಮಾಡಲು ದೂರದ ಪ್ರದೇಶಕ್ಕೆ ತೆರಳುವ ಬದಲು ಆಯ್ದ ದೇವಸ್ಥಾನ, ಶಾಲೆಗಳಿಗೆ ಹೋದರೆ ಅಲ್ಲಿಯೇ ಆಹಾರವಿಟ್ಟುಕೊಂಡು ಟ್ರಸ್ಟ್‌ನ ಸದಸ್ಯರು ಕಾಯ್ದುರುತ್ತಾರೆ.



ಬೆಂಗಳೂರಿನ ಬ್ಲಾಸಂ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮೊಹಿಸಿನ್ ಟ್ರಸ್ಟ್ ಮೂಲಕ ವೃದ್ಧನಿಗೆ ಉಚಿತ ಆಹಾರ ವಿತರಿಸುತ್ತಿರುವ ಟ್ರಸ್ಟ್ ಅಧ್ಯಕ್ಷ ಮೊಹಿಸಿನ್ ಷರೀಫ್.

ಕೋಮು ಸಾಮರಸ್ಯದ ಸಂಕೇತ ಎಂಬಂತೆ ಇಲ್ಲಿ ಜಾತಿ, ಮತಗಳ ಭೇದವಿಲ್ಲ. ಇರುವ ಏಕೈಕ ಅರ್ಹತೆಯೆಂದರೆ ಅವರು ವೃದ್ಧ, ನಿರ್ಗತಿಕ ಅಥವಾ ಅಂಗವಿಕಲರಾಗಿರಬೇಕು. ನಗರದ ಡಿ.ಜೆ. ಹಳ್ಳಿಯ ಹಾಜಿರಾ ಉರ್ದು ಪ್ರಾಥಮಿಕ ಶಾಲೆ, ನ್ಯೂ ಬ್ಲಾಸಂ ಹೈಸ್ಕೂಲ್, ಟ್ಯಾನರಿ ರಸ್ತೆಯ ಎ.ಕೆ.ಕಾಲೋನಿಯ ಮಲ್ಲಿಕಾರ್ಜುನ ಸ್ವಾಮಿ ಶಾಲೆ ಮತ್ತು ಉರ್ದು ಶಾಲೆ, ಬನಶಂಕರಿಯ ಯಾರಬ್ ನಗರದ ಖುಬಾ ಮಸೀದಿ, ಗುರಪ್ಪನಪಾಳ್ಯದ ಮುನಾವರ್ ಮಸೀದಿ ಸೇರಿದಂತೆ ನಗರದ ವಿವಿಧ ಶಾಲೆ, ದೇವಸ್ಥಾನ ಮತ್ತು ಮಸೀದಿಗಳಲ್ಲಿ ಈ ಸೇವೆ ಲಭ್ಯವಿದೆ.

**10 ಸಾವಿರದಿಂದ ಒಂದು ಲಕ್ಷಕ್ಕೆ:** ಪ್ರಸ್ತುತ ಪ್ರತಿದಿನ ಸುಮಾರು 10 ಸಾವಿರ ನಿರ್ಗತಿಕರಿಗೆ ಮಧ್ಯಾಹ್ನದ ಆಹಾರ ನೀಡುತ್ತಿರುವ ಟ್ರಸ್ಟ್ ಇನ್ನು ಮುಂದೆ ಈ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಹೆಚ್ಚಿಸುವ ಯೋಜನೆಯನ್ನೂ ಹೊಂದಿದೆ ' ಎನ್ನುತ್ತಾರೆ ಷರೀಫ್. ಇವರ ಸಾಮಾಜಿಕ ಸೇವೆಗಳನ್ನು ಗುರುತಿಸಿದ ಬೆಂಗಳೂರು ಮಹಾನಗರ ಪಾಲಿಕೆಯು ಈಚೆಗೆ 'ಕೆಂಪೇಗೌಡ ಪ್ರಶಸ್ತಿ'ಯನ್ನೂ ನೀಡಿ ಗೌರವಿಸಿದೆ.